# ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ, ಅರಸೀಕೆರೆ.

*ದಿನಾಂಕ 13/08/2020 ನೇ ಗುರುವಾರ ಬೆಳಗ್ಗೆ 11.30 ಗಂಟೆಗೆ ಸಮಿತಿಯ ಸಭಾಂಗಣದಲ್ಲಿ ಸಮಿತಿಯ ಅಧ್ಯಕ್ಷರಾದ ಶ್ರೀ ಸಿ.ಎನ್. ಧರ್ಮಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆದ ಸಮಿತಿಯ ಸಾಮಾನ್ಯ ಸಭೆಯ ನಡವಳಿಗಳು.*

| ಕ್ರ.ಸಂ. | ಹಾಜರಿ | ಕ್ರ.ಸಂ. | ಗೈರುಹಾಜರಿ |
|---|---|---|---|
| 1 | ಶ್ರೀ ಧರ್ಮಪ್ಪ ಸಿ.ಎನ್., ಅಧ್ಯಕ್ಷರು | 1 | ಶ್ರೀ ದೇವರಾಜು ಡಿ.ಜಿ., ಸದಸ್ಯರು |
| 2 | ಶ್ರೀ ಟಿ.ಜಿ. ಕುಮಾರ್, ಉಪಾಧ್ಯಕ್ಷರು | 2 | ಶ್ರೀಮತಿ ಡಿ.ಎನ್. ರೂಪ, ಸದಸ್ಯರು |
| 3 | ಶ್ರೀ ಚಂದ್ರಶೇಖರ್ ಕೆ.ಎಸ್., ಸದಸ್ಯರು | | |
| 4 | ಶ್ರೀ ಜಯರಾಮ, ಸದಸ್ಯರು | | – |
| 5 | ಶ್ರೀಮತಿ ಮಂಜುಳ, ಸದಸ್ಯರು | | |
| 6 | ಶ್ರೀ ಜಯಕುಮಾರ ಎಂ.ಸಿ., ಸದಸ್ಯರು | | |
| 7 | ಶ್ರೀಮತಿ ಪಾರ್ವತಮ್ಮ, ಸದಸ್ಯರು | | |
| 8 | ಶ್ರೀ ಶಶಿಧರ ಎನ್.ಈ.,ಸದಸ್ಯರು | | |
| 9 | ಶ್ರೀ ಶಶಿಕುಮಾರ್ ಹೆಚ್.ಸಿ., ಸದಸ್ಯರು | | |
| 10 | ಶ್ರೀ ಟಿ.ಎಸ್. ರುದ್ರಯ್ಯ, ಸದಸ್ಯರು | | |
| 11 | ಶ್ರೀ ನಾಗರಾಜನಾಯ್ಕ ಎ.ಸಿ., ಸದಸ್ಯರು | | |
| 12 | ಶ್ರೀ ಆರ್. ಚಿಕ್ಕೇಗೌಡ, ಸದಸ್ಯರು | | |
| 13 | ಶ್ರೀ ರೇಣುಕಾಪ್ರಸಾದ್, ಸದಸ್ಯರು | | |
| 14 | ಶ್ರೀ ಮಹಲಿಂಗಪ್ಪ, ಸದಸ್ಯರು | | |
| 15 | ಶ್ರೀ ಬಿ.ಆರ್. ಶ್ರೀಹರಿ, ಉಪ ನಿರ್ದೇಶಕರು, ಇಲಾಖಾ ಪ್ರತಿನಿಧಿ | | |

*ವಿಷಯ 1):* *ಸಮಿತಿಯ ಹಿಂದಿನ ಸಾಮಾನ್ಯ ಸಭೆ ದಿನಾಂಕ 10/03/2020 ರ ನಡವಳಿಗಳನ್ನು ಓದಿ ಒಪ್ಪಿ ದಾಖಲಿಸುವ ವಿಚಾರ.*

ತೀರ್ಮಾನ: ದಿನಾಂಕ 10/03/2020 ರ ಸಮಿತಿ ಸಾಮಾನ್ಯ ಸಭೆಯ ನಡವಳಿಗಳನ್ನು ಓದಿ ಒಪ್ಪಲಾಯಿತು.

*ವಿಷಯ 2):* *ಕೃಉಮಾಸ, ಅರಸೀಕೆರೆ – ಫೆಬ್ರವರಿ 2020 ರಿಂದ ಜುಲೈ 2020 ರವರೆಗಿನ ಮಾಹೆಗಳ ಜಮಾ–ಖರ್ಚಿನ ತಃಖ್ತೆಯನ್ನು ದಿನಾಂಕ 11/08/2020 ರಂದು ಜರುಗುವ ಆಡಿಟ್ ಉಪ ಸಮಿತಿ ಸಭೆಯಲ್ಲಿ ಒಪ್ಪಿರುವುದನ್ನು ಪರಿಶೀಲಿಸಿ ದೃಢೀಕರಿಸುವ ವಿಚಾರ.*

ತೀರ್ಮಾನ: ಸಮಿತಿಯ ಫೆಬ್ರವರಿ – 2020 ನೇ ಮಾಹೆಯಿಂದ ಜುಲೈ – 2020 ರ ಮಾಹೆಗಳ ಜಮಾ ಮತ್ತು ಖರ್ಚಿನ ತಃಖ್ತೆಯನ್ನು ದಿನಾಂಕ 11/08/2020 ರಂದು ನಡೆದ ಆಡಿಟ್ ಉಪ ಸಮಿತಿ ಸಭೆಯಲ್ಲಿ ವಿವರವಾಗಿ ಪರಿಶೀಲಿಸಿ ಒಪ್ಪಿರುವುದನ್ನು ದೃಢೀಕರಿಸಲಾಯಿತು.

*ವಿಷಯ 3):* *ಶ್ರೀಮತಿ ತಿಮ್ಮಮ್ಮ ಕೋಂ. ಜವರಯ್ಯ, ಬೋರನಕೊಪ್ಪಲು, ಕಸಬಾ ಹೋಬಳಿ, ಅರಸೀಕೆರೆ ತಾಲ್ಲೂಕು ವಿರುದ್ಧ ಎ.ಪಿ.ಎಂ.ಸಿ, ಅರಸೀಕೆರೆ ಒ.ಎಸ್. ಸಂಖ್ಯೆ 183/2020 ರನ್ವಯ ದಾಖಲು ಮಾಡಿರುವ ಮೊಕದ್ದಮೆಯ ವಿರುದ್ಧ ಸಮಿತಿ ಪರ ವಕೀಲರನ್ನು ನೇಮಿಸಿಕೊಂಡು ವಕಾಲತ್ ಸಲ್ಲಿಸಿರುವುದನ್ನು ಸ್ಥಿರೀಕರಿಸುವ ವಿಚಾರ.*

ತೀರ್ಮಾನ: ವಿಷಯವನ್ನು ಕೂಲಂಕುಶವಾಗಿ ಪರಿಶೀಲಿಸಲಾಯಿತು. ಅರಸೀಕೆರೆ ತಾಲ್ಲೂಕು ಕಸಬಾ ಹೋಬಳಿ, ಹಬ್ಬನಘಟ್ಟ ಗ್ರಾಮದ ಸರ್ವೆ ನಂ. 68 ರ 4.00 ಎಕರೆ ಪ್ರದೇಶದಲ್ಲಿ ಅರಸೀಕೆರೆ ಸಮಿತಿ ವತಿಯಿಂದ "ಸುಸಜ್ಜಿತ ಹಣ್ಣು ಮತ್ತು ತರಕಾರಿ ಮಾರುಕಟ್ಟೆ ಹಾಗೂ ಶೀಥಲೀಕರಣ ಘಟಕ ನಿರ್ಮಾಣ" ಕಾರ್ಯ ಸಾಗುತ್ತಿರುವ ಸರ್ವೆ ನಂ. 68 ರ 4.00 ಎಕರೆ ಪ್ರದೇಶದ ಪೈಕಿ 30 ಗುಂಟೆ ಪ್ರದೇಶ ಜಮೀನಿನ ಬಗ್ಗೆ ಒ.ಎಸ್. 183/2020 ರನ್ವಯ ತಕರಾರು ತೆಗೆದು ಶ್ರೀಮತಿ ತಿಮ್ಮಮ್ಮ ಕೋಂ. ಜವರಯ್ಯ, ಬೋರನಕೊಪ್ಪಲು, ಅರಸೀಕೆರೆ ಇವರು ಮೊಕದ್ದಮೆ

ದಾಖಲಿಸಿದ್ದಕ್ಕೆ ಸಂಬಂಧಿಸಿದಂತೆ ಸಮಿತಿ ವತಿಯಿಂದ ಸಕಾಲಿಕ ಕ್ರಮ ಕೈಗೊಂಡು ಶ್ರೀ ಕೆ.ಎ. ರವಿಶಂಕರ್, ಅರಸೀಕೆರೆ ಇವರನ್ನು ಸಮಿತಿ ಪರ ವಕೀಲರನ್ನಾಗಿ ನೇಮಿಸಿಕೊಂಡು ದಿನಾಂಕ 06/08/2020 ರಂದು ಸಮಿತಿ ಪರವಾಗಿ ನ್ಯಾಯಾಲಯಕ್ಕೆ ವಕಾಲತ್ ಸಲ್ಲಿಸಿ ಪ್ರಕರಣವನ್ನು ಮುನ್ನಡೆಸಿರುವುದನ್ನು ಒಪ್ಪಲಾಯಿತು ಹಾಗೂ ಮಾನ್ಯ ನಿರ್ದೇಶಕರ ಸುತ್ತೋಲೆಯನ್ವಯ ನಿಯಮಾನುಸಾರ ಸಮಿತಿ ಪರ ವಕೀಲರಿಗೆ ಕಾನೂನು ಶುಲ್ಕವನ್ನು ಪಾವತಿಸಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು.

*ವಿಷಯ 4):* ***ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ತೆಂಗಿನಕಾಯಿ ಮತ್ತು ಕೊಬ್ಬರಿ ಇ-ಟೆಂಡರ್‌ನ್ನು ಕೋವಿಡ್ -19 ಸೋಂಕಿನ ಹಿನ್ನಲೆಯಲ್ಲಿ ಲಾಕ್‌ಡೌನ್ ಸಮಯದಲ್ಲಿ ನಿಗದಿಪಡಿಸಿದಂತೆ ಟೆಂಡರ್ ಸಮಯವನ್ನು ಅಪರಾಹ್ನ 2.00 ಗಂಟೆಗೆ ನಿಗದಿಪಡಿಸಿರುವುದನ್ನು ಮುಂದುವರೆಸುವಂತೆ ವರ್ತಕರ ಮನವಿ ದಿನಾಂಕ 05/08/2020 ರಂದು ಸಲ್ಲಿಸಿರುವುದನ್ನು ಪರಿಶೀಲಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೋವಿಡ್ – 19 ಸೋಂಕಿನ ಹಿನ್ನಲೆಯಲ್ಲಿ ಅರಸೀಕೆರೆ ಮುಖ್ಯ ಮಾರುಕಟ್ಟೆ ಪ್ರಾಂಗಣದಲ್ಲಿ ನಡೆಯುವ ತೆಂಗಿನಕಾಯಿ ಮತ್ತು ಕೊಬ್ಬರಿ ಇ-ಟೆಂಡರ್ ಸಮಯವನ್ನು ಟೆಂಡರ್ ದಿವಸಗಳಂದು ಅಪರಾಹ್ನ 2.00 ಗಂಟೆಗೆ ನಿಗಧಿಪಡಿಸಿವಂತೆ ಕೋರಿ ಸಲ್ಲಿಸಿದ ವರ್ತಕರ ದಿನಾಂಕ 05/08/2020 ರ ಮನವಿಯನ್ನು ಪರಿಗಣಿಸಿ ಟೆಂಡರ್ ದಿವಸಗಳಂದು ಇ-ಟೆಂಡರ್ ಸಮಯವನ್ನು ಅಪರಾಹ್ನ 2.00 ಗಂಟೆಗೆ ನಿಗದಿಪಡಿಸಲು ಸಮಿತಿಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿ ಅದರಂತೆ ಕಾರ್ಯದರ್ಶಿಯವರಿಗೆ ಕಾರ್ಯೋನ್ಮುಖವಾಗಲು ಸೂಚಿಸಲಾಯಿತು.

*ವಿಷಯ 5):* ***ಕೃಉಮಾಸ, ಅರಸೀಕೆರೆ – ವಿಶೇಷ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ ಕೃಮಾಇ/ವಿಲೆಪ(ಮೈ)/435/2020-21 ದಿನಾಂಕ 31/03/2020 ರನ್ವಯ ಬಿಡುಗಡೆ ಮಾಡಲಾದ ಹಾಗೂ ಸಮಿತಿಗೆ ದಿನಾಂಕ 17/06/2020 ರಂದು ಸ್ವೀಕೃತಗೊಂಡ ಸಮಿತಿಯ 2018-19 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ಪರಿಶೀಲಿಸಿ ಕೈಗೊಂಡ ಕ್ರಮದ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸುವ ಕುರಿತು ಪರಿಶೀಲಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಕೃಉಮಾಸ, ಅರಸೀಕೆರೆ – ವಿಶೇಷ ಲೆಕ್ಕ ಪರಿಶೋಧಕರು, ಕೃಷಿ ಮಾರಾಟ ಇಲಾಖೆ, ಮೈಸೂರು ವಿಭಾಗ, ಮೈಸೂರು ಇವರ ಪತ್ರ ಸಂಖ್ಯೆ ಕೃಮಾಇ/ವಿಲೆಪ(ಮೈ)/435/2020-21 ದಿನಾಂಕ 31/03/2020 ರನ್ವಯ ಬಿಡುಗಡೆ ಮಾಡಲಾದ ಹಾಗೂ ಸಮಿತಿಗೆ ದಿನಾಂಕ 17/06/2020 ರಂದು ಸ್ವೀಕೃತಗೊಂಡ ಸಮಿತಿಯ 2018-19 ನೇ ಸಾಲಿನ ಲೆಕ್ಕ ಪರಿಶೋಧನಾ ವರದಿಯನ್ನು ವಿವರವಾಗಿ ಪರಿಶೀಲಿಸಲಾಯಿತು. ಸದರಿ ವರದಿಯಲ್ಲಿ ಸೂಚಿಸಿರುವ ಆಕ್ಷೇಪಣಾ ಕಂಡಿಕೆಗಳಿಗೆ ಅನುಪಾಲನಾ ವರದಿಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರಕ್ಕೆ ಸಲ್ಲಿಸುವ ಬಗ್ಗೆ ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಿ ಅದರಂತೆ ಕಾರ್ಯದರ್ಶಿಯವರಿಗೆ ಕಾರ್ಯೋನ್ಮುಖವಾಗಲು ಸೂಚಿಸಲಾಯಿತು.

*ವಿಷಯ 6):* ***ಕೃಉಮಾಸ, ಅರಸೀಕೆರೆ – ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ ಸಇ/306/ಎಂ.ಆರ್.ಇ/2020/ಇ.ಆ./ಬೆಂಗಳೂರು ದಿನಾಂಕ 04/08/2020 ರ ಆದೇಶದಂತೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ ಕೃಮಾಇ/ನಿಯವಿ/ತಿದ್ದುಪಡಿ/17/2020-21 ದಿನಾಂಕ 05/08/2020 ರನ್ವಯ "ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕದ ದರವನ್ನು ಇಳಿಸಿದ್ದು ಉಪ ನಿಯಮಗಳಿಗೆ ತಿದ್ದುಪಡಿ ತರುವ ಬಗ್ಗೆ" ಸಾರ್ವಜನಿಕರಿಂದ ಸಲಹೆ/ ಆಕ್ಷೇಪಣೆಗಳನ್ನು ಆಹ್ವಾನಿಸುವ ವಿಚಾರ.***

ತೀರ್ಮಾನ: ವಿಷಯವನ್ನು ಪರಿಶೀಲಿಸಲಾಯಿತು. ಸರ್ಕಾರದ ನಡವಳಿಗಳ ಆದೇಶ ಸಂಖ್ಯೆ ಸಇ/306/ಎಂ.ಆರ್.ಇ/2020/ಇ.ಆ./ಬೆಂಗಳೂರು ದಿನಾಂಕ 04/08/2020 ರ ಆದೇಶದಂತೆ ಮಾನ್ಯ ನಿರ್ದೇಶಕರು, ಕೃಷಿ ಮಾರಾಟ ಇಲಾಖೆ, ಬೆಂಗಳೂರು ಇವರ ಕಛೇರಿ ಸುತ್ತೋಲೆ ಸಂಖ್ಯೆ ಕೃಮಾಇ/ನಿಯವಿ/ತಿದ್ದುಪಡಿ/17/2020-21 ದಿನಾಂಕ 05/08/2020 ರನ್ವಯ "ರಾಜ್ಯದಲ್ಲಿನ ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿಗಳು ಆಕರಿಸುತ್ತಿರುವ ಮಾರುಕಟ್ಟೆ ಶುಲ್ಕ/ ಬಳಕೆದಾರರ ಶುಲ್ಕದ ದರವನ್ನು ಇಳಿಸಿದ್ದು ಕೇಂದ್ರ ಕಛೇರಿ ನಿರ್ದೇಶನದಂತೆ ಉಪ ನಿಯಮ ಸಂಖ್ಯೆ 11(1) ತಿದ್ದುಪಡಿ ಬಗ್ಗೆ ರೈತರಿಂದ, ಖರೀದಿದಾರರಿಂದ, ಸಾರ್ವಜನಿಕರಿಂದ ಯಾವುದೇ ಸಲಹೆ/ ಸೂಚನೆ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ 30 ದಿವಸಗಳ ಕಾಲಾವಕಾಶ ನೀಡಿ ಪ್ರಕಟಣೆ ನೀಡಲು ಸಭೆಯು ಸರ್ವಾನುಮತದಿಂದ ಒಪ್ಪಿ ತೀರ್ಮಾನಿಸಲಾಯಿತು.

***ವಿಷಯ 7): ಕೃಉಮಾಸ, ಅರಸೀಕೆರೆ – ಸಮಿತಿಗೆ ಕೃಷಿ ಹುಟ್ಟುವಳಿಗಳನ್ನು ವ್ಯವಹರಿಸಲು ನವೀಕರಣ/ ಹೊಸದಾಗಿ ದಲ್ಲಾಲರ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳನ್ನು ಪರಿಶೀಲಿಸಿ ಲೈಸೆನ್ಸ್ ಮಂಜೂರು ಮಾಡುವ ವಿಚಾರ.***

ತೀರ್ಮಾನ: ಸಮಿತಿಗೆ ನವೀಕರಣ ಕೋರಿ/ ಹೊಸದಾಗಿ ಲೈಸೆನ್ಸ್ ಕೋರಿ ಬಂದಿರುವ ಕೆಳಕಂಡ ಅರ್ಜಿಯನ್ನು ಪರಿಶೀಲಿಸಲಾಯಿತು.

**ನವೀಕರಣ ಕೋರಿ ಬಂದಿರುವ ಅರ್ಜಿಗಳು**

| ಕ್ರ.ಸಂ. | ದಲ್ಲಾಲರ ಹೆಸರು ಮತ್ತು ವಿಳಾಸ | ಲೈಸೆನ್ಸ್ ವರ್ಗ |
|---|---|---|
| 1 | ಹೆಚ್.ಎಂ. ಶ್ರೀನಾಗ್ ಟ್ರೇಡರ್ಸ್,<br>ಪ್ರೋ॥ ಹೆಚ್.ಎನ್. ಮಂಜುನಾಥ, ಬಿನ್ ಹೆಚ್.ಎಂ. ಸತ್ಯನಾರಾಯಣ ಶೆಟ್ಟಿ, ಲಕ್ಷ್ಮೀಪುರ, ಅರಸೀಕೆರೆ<br>ಮೊ॥ 9448450231 | ದಲ್ಲಾಲರು |
| 2 | ಡಿ.ಎಂ. ಶಿವಮೂರ್ತಿ ಟ್ರೇಡರ್ಸ್,<br>ಪ್ರೋ॥ ಎಸ್. ಧನಂಜಯ ಬಿನ್ ಎಂ. ಶಿವಮೂರ್ತಿ,<br>ದೊಡ್ಡೇನಹಳ್ಳಿ, ಅರಸೀಕೆರೆ. ಮೊ॥9480782972 | ದಲ್ಲಾಲರು |
| 3 | ಕೆ. ವಿಶ್ವನಾಥ, ಪ್ರೋ॥ ಕೆ. ವಿಶ್ವನಾಥ ಬಿನ್ ಕೆ. ಕಾಳೇಗೌಡ,<br>ಜಿ.ಜಿ. ರಸ್ತೆ, ಅರಸೀಕೆರೆ, ಮೊ॥ 9901709751 | ದಲ್ಲಾಲರು |

**ಹೊಸದಾಗಿ ಲೈಸೆನ್ಸ್ ಕೋರಿ ಬಂದಿರುವ ಅರ್ಜಿಗಳು**

| ಕ್ರ.ಸಂ. | ಹೆಸರು ಮತ್ತು ವಿಳಾಸ | ಲೈಸೆನ್ಸ್ ವರ್ಗ |
|---|---|---|
| 1 | ಶ್ರೀ ಮಲ್ಲೇಶ್ವರ ಟ್ರೇಡರ್ಸ್,<br>ಪ್ರೋ॥ ಶ್ರೀಮತಿ ಶಶಿಕಲಾ ಕೋಂ. ಎಂ.ಸಿ. ಜಗದೀಶ್<br>ಬಸವ ಕೃಪ, ಲಕ್ಷ್ಮೀಪುರ, ಅರಸೀಕೆರೆ. ಮೊ॥ 9448132616 | ದಲ್ಲಾಲರು |
| 2 | ಶ್ರೀ ದುರ್ಗಾಂಬ ಟ್ರೇಡರ್ಸ್,<br>ಪ್ರೋ॥ ಶ್ರೀಮತಿ ಎಸ್.ವಿ. ಚೇತನ, ಕೋಂ. ಎನ್.ಎಸ್. ವೆಂಕಟೇಶ್,<br>ಹೆಂಜಗೊಂಡನಹಳ್ಳಿ ಬಡಾವಣೆ, ಹೌಸಿಂಗ್ ಬೋರ್ಡ್, ಅ'ಸೀಕೆರೆ<br>ಮೊ॥ 9845496791 | ದಲ್ಲಾಲರು |

ಅರಸೀಕೆರೆ ಮಾರುಕಟ್ಟೆ ಪ್ರಾಂಗಣದ ವ್ಯಾಪ್ತಿಯಲ್ಲಿ ನಿಯಂತ್ರಿತ ಕೃಷಿ ಹುಟ್ಟುವಳಿಗಳನ್ನು ವ್ಯವಹರಿಸಲು 2020-21 ರಿಂದ 2029-30 ನೇ ಸಾಲಿನವರೆಗೆ 10 ವರ್ಷಗಳ ಅವಧಿಗೆ ದಲ್ಲಾಲರ ಪರವಾನಿಗೆಯನ್ನು ನವೀಕರಿಸಿ/ ಹೊಸದಾಗಿ ಮಂಜೂರು ಮಾಡಬಹುದೆಂದು ಒಪ್ಪಿ ತೀರ್ಮಾನಿಸಲಾಯಿತು.